ಮಾಸ್ಕೋದ 'ಕ್ರೆಮ್ಲಿನ್' ಒಂದು ಪರಂಪರೆಯನ್ನೇ ತನ್ನೊಳಗೆ ಜೀವಂತವಾಗಿರಿಸಿಕೊಂಡಿರುವ ಪ್ರದೇಶ. ಅರಮನೆಗಳು, ಉದ್ಯಾನಗಳು, ವಸ್ತು ಸಂಗ್ರಹಾಲಯಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ಪುಟ್ಟದೊಂದು ಜಗತ್ತನ್ನೇ ಒಳಗೊಂಡಿರುವ ಕ್ರೆಮ್ಲಿನ್, ತನ್ನ ವೈಭವ ಹಾಗೂ ಚಾರಿತ್ರಿಕ ಸಮೃದ್ಧತೆಯಿಂದ ಪ್ರವಾಸಿಗರ ಮನಸೂರೆಗೊಳ್ಳುತ್ತದೆ.



ವಿಶ್ವದ ಅತಿ ದೊಡ್ಡ ಗಂಟೆ ಎನ್ನುವ ಅಗ್ಗಳಿಕೆಯ ತ್ಸಾರ್ ಗಂಟೆ

ಗುಮ್ಮಟ, ಅದರ ಮೇಲೆ ಏಸುವಿನ ಕ್ರಾಸ್ – ಇದು ಮೇಲ್ನೋಟಕ್ಕೆ ಕಂಡು ಬರುವ 'ಇವಾನ್ ದಿ ಗ್ರೇಟ್ ಬೆಲ್ ಟವರ್'ನ ಆಕರ್ಷಣೆ. 22 ಗಂಟೆಗಳಿರುವ ಈ ಗೋಪುರವನ್ನು 1508ರಲ್ಲಿ ಕಟ್ಟಿಸಿದರಂತೆ. ಅದನ್ನು ವೀಕ್ಷಣೆಯ ಅಟ್ಟದವರೆಗೆ ಹತ್ತಬಹುದು. ಕ್ರಿಸ್‌ಮಸ್ ಮತ್ತು ಈಸ್ಟರ್ ಸಮಯದಲ್ಲಿ ಹೊಡೆಯುವ ಇಲ್ಲಿನ ಗಂಟೆಯ ಶಬ್ದವನ್ನು ಒಮ್ಮೆಯಾದರೂ ಕೇಳಿಸಿಕೊಳ್ಳಬೇಕು ಎಂದು ನಮ್ಮ ಮಾರ್ಗದರ್ಶಿ ಭಾವುಕತೆಯಿಂದ ಹೇಳಿದರು.

## ತ್ಸಾರ್ ಬೆಲ್ ಮತ್ತು ತ್ಸಾರ್ ಕ್ಯಾನನ್

ಸುಮಾರು 20 ಅಡಿ ಎತ್ತರ, 22 ಅಡಿ ಸುತ್ತಳತೆ ಇರುವ 'ತ್ಸಾರ್ ಬೆಲ್' ಹೆಸರಿನ ಕಂಚಿನ ಗಂಟೆಯ ತೂಕ ಬರೋಬ್ಬರಿ 200 ಟನ್. ಅಚ್ಚರಿಯ ಸಂಗತಿಯೆಂದರೆ ಅದನ್ನು ಉಪಯೋಗಿಸಿಲ್ಲ ಅಂದರೆ ಯಾರೂ ಗಂಟೆಯನ್ನು ಬಾರಿಸಿಲ್ಲ. 1735ರಲ್ಲಿ ರಾಣಿ ಅನ್ನಾ ಇವನೋವ್ನಾಗೋಸ್ಕರ ತಯಾರಿಸಿದ ಗಂಟೆಯಂತೆ ಇದು.

ವಿಶ್ವದ ಅತಿ ದೊಡ್ಡ ಗಂಟೆಯೆಂದು ಗುರುತಿಸಲಾಗುವ ಈ ಗಂಟೆ ಮುಕ್ಕಾಗಿದೆ. ಬೆಂಕಿ ಆಕಸ್ಮಿಕದಲ್ಲಿ ತಣ್ಣೀರನ್ನು ಎರಚಿದಾಗ ಗಂಟೆಯ ಒಂದು ತುಂಡು ದೂರ ಸಿಡಿಯಿತಂತೆ. ಗಂಟೆಯ ಮೇಲೆ ಏಸು, ಮೇರಿ, ದೇವತೆಗಳು ಮತ್ತು ರಾಣಿ ಅನ್ನಾಳ ಚಿತ್ರವೂ ಇದೆ.

ತ್ಸಾರ್ ಕ್ಯಾನನ್ ವಿಶ್ವದ ಅತಿ ದೊಡ್ಡ ತೋಪುಗಳಲ್ಲೊಂದು. ಈ ಫಿರಂಗಿಯನ್ನು 16ನೇ ಶತಮಾನದಲ್ಲಿ ತಯಾರಿಸಿದರೂ ಎಂದೂ ಉಪಯೋಗಿಸಲಿಲ್ಲ. ಈಗ ಪ್ರವಾಸಿಗರ ಫೋಟೊದಲ್ಲಿ ಕಾಣಿಸುತ್ತಿದೆ.



ವಸ್ತು ಸಂಗ್ರಹಾಲಯದೊಳಗಿನ ಅಮೂಲ್ಯ ನಿಧಿ

## ಗ್ರಾಂಡ್ ಕ್ರೆಮ್ಲಿನ್ ಅರಮನೆ

'ಗ್ರಾಂಡ್ ಕ್ರೆಮ್ಲಿನ್' ಎನ್ನುವುದೊಂದು ಅರಮನೆಯಲ್ಲ, ಅದು ಅರಮನೆಗಳ ಸಂಕೀರ್ಣ. ಒಂದು ಕಾಲದಲ್ಲಿ ಈ ಸಂಕೀರ್ಣ ಅರಸೊತ್ತಿಗೆಯವರ ನೆಲೆಯಾಗಿತ್ತು. ಈಗಲ್ಲಿ ರಷ್ಯಾದ ಅಧ್ಯಕ್ಷರ ರಾಜಕೀಯ ಸಮಾರಂಭಗಳು ನಡೆಯುತ್ತವಂತೆ. ಅದ್ದೂರಿಯಾಗಿರುವ ಅರಮನೆಗೆ ತಾಗಿಕೊಂಡೇ ಹಲವು ಪುಟ್ಟ ಅರಮನೆಗಳು, ಚರ್ಚುಗಳು ಅಲ್ಲಿವೆ. ಬಿಳಿ ಬಣ್ಣದ ಮಾರ್ಬಲಿನ ಕಟ್ಟಡವನ್ನು ಹೊರಗಿನಿಂದಲೇ ನೋಡಿ ತೃಪ್ತಿಪಟ್ಟುಕೊಳ್ಳಬೇಕಾಯಿತು.

'ಕ್ರೆಮ್ಲಿನ್ ಆರ್ಮರಿ ಮ್ಯೂಸಿಯಂ' (ಶಸ್ತ್ರಾಸ್ತ್ರಗಳ ಉಗ್ರಾಣ) ಹೆಸರು ನೋಡಿದರೆ ಯಾವುದೋ ಶಸ್ತ್ರಾಸ್ತ್ರಗಳ ಕೋಠಿ ಎಂದೆಣಿಸಿದರೆ ಅದು ತಪ್ಪು. ಇದು ರಾಜ ಪರಿವಾರದವರಿಗೆ ಸಂಬಂಧಪಟ್ಟ ವಸ್ತುಗಳ ಸಂಗ್ರಹ. ಕೆಲವು ಸ್ವಂತದ್ದು, ಕೆಲವೊಂದು ಉಡುಗೊರೆಯಾಗಿ ಬಂದದ್ದು. ಈ ಆರ್ಮರಿ ಮ್ಯೂಸಿಯಂ ನೋಡದಿದ್ದರೆ ಮಾಸ್ಕೋದ ಕೋಟೆಯ ಸುತ್ತಾಟ ಅಪೂರ್ಣ.

ಬೆಳ್ಳಿ ಮತ್ತು ಚಿನ್ನದ ಸಾಮಗ್ರಿಗಳ ಮತ್ತು ಆಭರಣಗಳ ಭಂಡಾರವೇ ಅಲ್ಲಿದೆ. ರಷ್ಯಾದ ಹಿಂದಿನ ರಾಜರು, ಚಕ್ರವರ್ತಿಗಳು ಧರಿಸಿದ ಹಲವಾರು ಕಿರೀಟಗಳು, ಟೊಪ್ಪಿಗಳಿವೆ. ಎಲ್ಲದರಲ್ಲಿಯೂ ಚಿನ್ನ, ವಜ್ರ, ಕೆಂಪು, ಪಚ್ಚೆ, ನೀಲ ಮಣಿಗಳನ್ನು ಧಾರಾಳವಾಗಿ ಉಪಯೋಗಿಸಿದ್ದಾರೆ. ಇದರಲ್ಲಿ ನನಗೆ ಮೆಚ್ಚುಗೆಯಾಗಿದ್ದು ಚಿನ್ನದ ಗೊಸ್ಪೆಲ್, ವ್ಲಾಡಿಮೀರ್ ಜಾಗದ ಮಹಿಳೆಯ ಪ್ರತಿಮೆ ಹಾಗೂ ಚಿನ್ನದ ಮೊಟ್ಟೆಗಳು.

ಅರಸೊತ್ತಿಗೆಯ ಹಲವು ಸವಾರಿ ಬಂಡಿಗಳೂ ಇವೆ. ಚಕ್ರವರ್ತಿಗಳು, ರಾಜಾ, ರಾಣಿಯರು ಪಟ್ಟಾಭಿಷೇಕದ ಸಮಯದಲ್ಲಿ ಹಾಕಿದ ಡ್ರೆಸ್ಸುಗಳನ್ನು ಗಾಜಿನ ಪೆಟ್ಟಿಗೆಗಳಲ್ಲಿ ಇಟ್ಟಿದ್ದಾರೆ. ಡ್ರೆಸ್ಸುಗಳಲ್ಲಿ ಧಾರಾಳವಾಗಿ ಚಿನ್ನ ಮತ್ತು ಬೆಳ್ಳಿಯ ಎಳೆಗಳ ಕಸೂತಿ, ಹವಳ ಮತ್ತು ಮುತ್ತುಗಳಿವೆ.

ಸಂಗ್ರಹಾಲಯದ ಎರಡನೆಯ ಅಂತಸ್ತಿನಲ್ಲಿದೆ ರಷ್ಯಾದ ಯುದ್ಧ ಸಾಮಗ್ರಿಗಳ ಪ್ರದರ್ಶನ. ರಷ್ಯಾ ಮೊದಲಿನಿಂದಲೂ ಯುದ್ಧ ಸಾಮಗ್ರಿಗಳ ತಯಾರಿಕೆ ಮತ್ತು ಮಾರಾಟದಲ್ಲಿ ಮುಂದಿತ್ತು. ದಂತ, ಬೆಳ್ಳಿ, ಚಿನ್ನ ಮತ್ತು ಮುತ್ತುಗಳಿಂದ ಅಲಂಕೃತಗೊಂಡ ಬಂದೂಕುಗಳು ನೋಡುಗರ ಗಮನ ಸೆಳೆಯುತ್ತವೆ. ರಷ್ಯನ್ನರು ಕುದುರೆ ಪ್ರಿಯರು ಎನ್ನುವುದಕ್ಕೆ ಸಾಕ್ಷ್ಯವೆನ್ನುವಂತೆ ಕುದುರೆಗೆ ಸಂಬಂಧಪಟ್ಟ ಹಲವು ಸರಂಜಾಮುಗಳು, ಜೀನುಗಳು ಅಲ್ಲಿವೆ. ಇವುಗಳೆಲ್ಲಾ ಸಾಧಾರಣದವುಗಳಲ್ಲ, ಚಿನ್ನದ ಅಥವಾ ಚಿನ್ನದ ಲೇಪನವಿದ್ದು ಅದರ ಮೇಲೆ ಪಚ್ಚೆ, ಹವಳ ಮತ್ತು ಕೆಂಪು ಹರಳುಗಳ ಅಲಂಕಾರವಿದೆ.

ಪ್ರವಾಸ ಪ್ರಿಯರು, ಇತಿಹಾಸ ಪ್ರಿಯರು, ಪ್ರಕೃತಿ ಪ್ರಿಯರು ನೋಡಲೇ ಬೇಕಾದ ಜಾಗ ಮಾಸ್ಕೋ. ಅಲ್ಲಿಗೆ ಹೋದವರು ಕ್ರೆಮ್ಲಿನ್‌ಗೆ ಹೋಗದಿದ್ದರೆ ಕಾಶಿಗೆ ಹೋಗಿ ಗಂಗೆಯನ್ನು ನೋಡದೆ ಬಂದಂತಾಗುತ್ತದೆ. ■